## 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ
## ಇವರ ನ್ಯಾಯಾಲಯದಲ್ಲಿ, ಬೆಳಗಾವಿ.

ಸ್ಪೆಷಲ್ ಕೇಸ ನಂಃ 290/2022

ಪಿಡಬ್ಲು :14 ಸಿಡಬ್ಲು :17

| | |
|---|---|
| ಸಾಕ್ಷಿಯ ಹೆಸರು | : ಶ್ರೀಮತಿ.ರಾಜಶ್ರೀ ಬಾಸಿಂಗೆ |
| ಗಂಡನ ಹೆಸರು | : ಶ್ರೀ.ಮಹೇಶ ಬಾಸಿಂಗೆ |
| ವಯಸ್ಸು | : 30 ವರ್ಷ |
| ಉದ್ಯೋಗ | : ಗೃಹಿಣಿ |
| ವಾಸ್ತವ್ಯ | : ಅಥಣಿ |
| ದಿನಾಂಕ | : 13-03-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

### ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ

ಚಾಸಾಃ 8 ಸುರೇಶ ನನಗೆ ಗೊತ್ತಿರುತ್ತಾರೆ. ಚಾಸಾಃ 13 ಮಲ್ಲಪ್ಪ ನನಗೆ ಗೊತ್ತಿರುತ್ತಾರೆ, ಅವರು ನಮ್ಮ ಮನೆಯಲ್ಲಿ ಕೆಲಸಕ್ಕೆ ಇದ್ದರು. 2ನೇ ಆರೋಪಿ ಸುರೇಶ ನನ್ನ ಅಣ್ಣ. 3, 4 ಮತ್ತು 5 ನೇ ಆರೋಪಿತರು ನನ್ನ ಚಿಕ್ಕಪ್ಪಂದಿರು. 6ನೇ ಆರೋಪಿ ನನ್ನ ಅಣ್ಣ. 7 ಮತ್ತು 8 ನೇ ಆರೋಪಿತರು ನನ್ನ ಮಾವಂದಿರು.

2. ನಾನು ಪೋನನ್ನು ರಿಚಾರ್ಜ ಮಾಡುವ ಸಲುವಾಗಿ ಚಾಸಾಃ 13 ಮಲ್ಲಪ್ಪ ರವರಿಗೆ ನನ್ನ ಪೋನ ನಂಬರ ನೀಡಿದ್ದೇನು. ಸದರಿ ಮಲ್ಲಪ್ಪ ಅವರು ನನ್ನ ಪೋನ ನಂಬರನ್ನು ಚಾಸಾಃ 8 ಸುರೇಶ ಅವರಿಗೆ ನೀಡಿದ್ದರು. ಚಾಸಾಃ 8 ಸುರೇಶ ಅವರು ನನಗೆ 3-4 ಸಾರಿ ಪೋನ ಮಾಡಿದ್ದರು, ಆ ವಿಚಾರವನ್ನು ನಾನು ನನ್ನ ತಂದೆ ತಾಯಿಗೆ ಹೇಳಿದ್ದೇನು. ನಮ್ಮ ತಂದೆ ತಾಯಿ ಆ ವಿಚಾರವನ್ನು ಮಲ್ಲಪ್ಪ ಅವರಿಗೆ ಹೇಳಿದ್ದರು.

3. ಮಲ್ಲಪ್ಪ ಅವರು ನನ್ನ ಫೋನ ನಂಬರನ್ನು ಸುರೇಶ ಅವರಿಗೆ ನೀಡಿದ್ದರಿಂದ ಅವರು ನನಗೆ ಫೋನ ಮಾಡುತ್ತಿದ್ದರು ಎನ್ನುವ ವಿಚಾರವನ್ನು ನಾನು ಪೋಲಿಸರಿಗೆ ಹೇಳಿದ್ದೇನೆ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ. ಎಮ್.ಎಸ್.ಪಿ ವಕೀಲರಿಂದ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.